# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ: | 759 |
| ಮಾನ್ಯ ಸದಸ್ಯರ ಹೆಸರು: | ಶ್ರೀ. ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 21.08.2026 |
| ಉತ್ತರಿಸುವ ಸಚಿವರು: | ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ದೇಶದ ಹೆಚ್.ಐ.ವಿ ಪೀಡಿತರ ಪಟ್ಟಿಯಲ್ಲಿ ಕರ್ನಾಟಕ ರಾಜ್ಯವು ಯಾವ ಸ್ಥಾನದಲ್ಲಿದೆ; ರಾಜ್ಯದಲ್ಲಿರುವ ಹೆಚ್ಐವಿ ಪೀಡಿತರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಷ್ಟ್ರೀಯ ಏಡ್ಸ್ ನಿಯಂತ್ರಣ ಮಂಡಳಿ (NACO), ನವದೆಹಲಿ ಪ್ರಕಟಿಸಿರುವ ರಾಷ್ಟ್ರೀಯ ವರದಿ ಸಂಕಲಕ್ 7ನೇ ಆವೃತ್ತಿ ಪ್ರಕಾರ ಹೆಚ್.ಐ.ವಿ ಸೋಂಕಿತರ ಸಂಖ್ಯೆಯಲ್ಲಿ ಕರ್ನಾಟಕ ರಾಜ್ಯವು 3ನೇ ಸ್ಥಾನದಲ್ಲಿದೆ.<br><br>ಜಿಲ್ಲಾವಾರು ಹೆಚ್ಐವಿ ಸೋಂಕಿತರ ಸಂಖ್ಯೆಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ | ಹೆಚ್.ಐ.ವಿ ತಡೆಗಟ್ಟಲು ರಾಜ್ಯ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ಈ ಕ್ರಮಗಳಿಂದ ರಾಜ್ಯದಲ್ಲಿ ಹೆಚ್ಐವಿ ಪೀಡಿತರ ಸಂಖ್ಯೆ ಇಳಿಮುಖವಾಗಿದೆಯೇ; ಆಗಿದ್ದಲ್ಲಿ ಸಂಪೂರ್ಣ ವಿವರ ನೀಡುವುದು; | ಹೆಚ್ಐವಿ ಸೋಂಕನ್ನು ತಡೆಗಟ್ಟಲು ರಾಜ್ಯ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.<br><br>• ವಿವಿಧ ಇಲಾಖೆಗಳಲ್ಲಿ ಸಮಗ್ರ ಆರೋಗ್ಯ ಶಿಬಿರಗಳನ್ನು (Integrated Health Camps) ಆಯಾ ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿಗಳ ಸಹಯೋಗದೊಂದಿಗೆ ನಡೆಸಲಾಗುತ್ತಿದೆ.<br>• Index ಪರೀಕ್ಷೆಗಳ ಮೂಲಕ ಸಂಪರ್ಕ ಪತ್ತೆಹಚ್ಚುವಿಕೆ (contact tracing) ಮಾಡಲಾಗುತ್ತಿದೆ. Index ಪರೀಕ್ಷೆಗಳ ಮೂಲಕ ರೆಫೆರಲ್ ಕಾರ್ಡ್‌ಗಳನ್ನು ನೀಡಿ ಅವರೊಂದಿಗೆ ಲೈಂಗಿಕ ಸಂಪರ್ಕ ಇರುವವರನ್ನು ಗುರುತಿಸಲಾಗುತ್ತಿದೆ.<br><br>• ಗುರಿ ನಿರ್ಧಾರಿತ ಕಾರ್ಯಕ್ರಮದಡಿಯಲ್ಲಿ ಅಪಾಯದ ಅಂಚಿನಲ್ಲಿರುವ ಗುಂಪುಗಳಾದ ಲೈಂಗಿಕ ವೃತ್ತಿನಿರತ ಮಹಿಳೆಯರು, ಪುರುಷ ಲೈಂಗಿಕ ಸಂಪರ್ಕ ಹೊಂದುವವರು, ಮಂಗಳಮುಖಿಯರು, ಮಾದಕ ವ್ಯಸನಿಗಳು, ವಲಸಿಗರು, ಲಾರಿ ಚಾಲಕರನ್ನು ಫಲಾನುಭವಿಗಳಾಗಿ ಗುರುತಿಸಿ ಇವರುಗಳಿಗೆ ಹೆಚ್ಐವಿ ಸೋಂಕಿನ ತಿಳುವಳಿಕೆ ವೈದ್ಯಕೀಯ ತಪಾಸಣೆ, ಹೆಚ್ಐವಿ ಸೋಂಕಿನ ಪತ್ತೆ ಪರೀಕ್ಷೆ, ಲೈಂಗಿಕ ಸಂಪರ್ಕದ ಸೋಂಕಿಗೆ ಚಿಕಿತ್ಸೆ ನೀಡುವುದು, ಉಚಿತ ಕಾಂಡೋಮ್ ವಿತರಣೆ, ಸೋಂಕು ಪತ್ತೆಯಾದ ವ್ಯಕ್ತಿಗಳನ್ನು ಉಚಿತ ಎ.ಆರ್.ಟಿ ಕೇಂದ್ರಗಳಿಗೆ ನೊಂದಾಯಿಸುವುದು ಮುಂತಾದ ಸೇವೆಗಳನ್ನು ಸಾಮಾಜಿಕ ಸೇವೆಯಲ್ಲಿ ತೊಡಗಿರುವ 96 ವಿವಿಧ ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಸಮುದಾಯ ಆಧಾರಿತ ಸಂಘಟನೆಗಳ ಸಹಭಾಗಿತ್ವದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಇದರಿಂದಾಗಿ ಹೆಚ್ಐವಿ ಹರಡುವ ಅಪಾಯವನ್ನು ಕಡಿಮೆ ಮಾಡುವುದರೊಂದಿಗೆ ಹೊಸ ಹೆಚ್ಐವಿ ಪ್ರಕರಣಗಳ ಸಂಭವನೀಯತೆಯನ್ನು ಕಡಿಮೆ ಮಾಡಲಾಗುತ್ತಿದೆ.<br><br>• ವಿವಿಧ ಇಲಾಖೆಯ ಮುಖ್ಯಸ್ಥರೊಂದಿಗೆ ಜಂಟಿ ಕಾರ್ಯಕಾರಿ ಸಭೆಯನ್ನು ನಡೆಸಿ, ಆಯಾ ಇಲಾಖೆ/ಸಂಸ್ಥೆಗಳಲ್ಲಿ ಹೆಚ್ಐವಿ/ಏಡ್ಸ್ ಬಗ್ಗೆ ಮಾಹಿತಿ ನೀಡಿ, ಅವರ ಆರೋಗ್ಯ ಸ್ಥಿತಿ ತಿಳಿದುಕೊಳ್ಳಲು QR Code ಸ್ಕ್ಯಾನ್ |

| | | |
|---|---|---|
| | | ಮಾಡುವ ಮೂಲಕ Self Risk Assessment ಮಾಡಿಕೊಳ್ಳಲು ತಿಳಿಸಲಾಗುತ್ತಿದೆ.<br><br>• ವಿವಿಧ ಸಾಮಾಜಿಕ ಜಾಲತಾಣಗಳ ಮೂಲಕ ಹೆಚ್‌ಐವಿ/ಏಡ್ಸ್ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ<br><br>• ಹೆಚ್‌ಐವಿ/ಏಡ್ಸ್‌ಗೆ ಸಂಬಂಧಿಸಿದಂತೆ ವಿಡಿಯೋ ಸ್ಪಾಟ್‌ಗಳನ್ನು ದೂರದರ್ಶನ ಮತ್ತು ಖಾಸಗಿ ಚಾನಲ್‌ಗಳ ಮೂಲಕ ಪ್ರಸಾರ ಮಾಡಲಾಗುತ್ತಿದೆ.<br><br>• ರೇಡಿಯೋ ಚಾನಲ್‌ಗಳ ಮೂಲಕ ಆಡಿಯೋ ಸ್ಪಾಟ್‌ಗಳನ್ನು ಬಿತ್ತರಿಸಲಾಗುತ್ತಿದೆ.<br><br>• ರಾಜ್ಯದಾದ್ಯಂತ ಮಾರುಕಟ್ಟೆ, ಬಸ್ ನಿಲ್ದಾಣಗಳು, ರೈಲು ನಿಲ್ದಾಣಗಳಂತಹ ಪ್ರಮುಖ ಸ್ಥಳಗಳಲ್ಲಿ ಫ್ಲಾಶ್ ಮಾಬ್‌ಗಳನ್ನು ಆಯೋಜಿಸಿ ಸಾರ್ವಜನಿಕರಿಗೆ ಹೆಚ್‌ಐವಿ/ಏಡ್ಸ್ ಕುರಿತು ಮಾಹಿತಿ ನೀಡಲಾಗುತ್ತಿದೆ.<br><br>• ಬೆಂಗಳೂರಿನ apartment ಗಳ ಎಲಿವೇಟರ್ ಲಾಬಿಗಳಲ್ಲಿ ಎಲ್‌ಸಿಡಿ/ಎಲ್‌ಇಡಿ ಗಳಲ್ಲಿ ಹೆಚ್‌ಐವಿ/ಏಡ್ಸ್ ಮಾಹಿತಿಯನ್ನು ಪ್ರಸಾರ ಮಾಡಲಾಗುತ್ತಿದೆ.<br><br>• ರಾಜ್ಯದಾದ್ಯಂತ ಹೋರ್ಡಿಂಗ್‌ಗಳ ಮೇಲೆ ಹೆಚ್‌ಐವಿ/ಏಡ್ಸ್ ಮಾಹಿತಿಯುಳ್ಳ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿದೆ.<br><br>• ರಾಜ್ಯದಾದ್ಯಂತ ಚಿತ್ರಮಂದಿರಗಳ ಪರದೆಗಳ ಮೂಲಕ ಹೆಚ್‌ಐವಿ/ಏಡ್ಸ್ ಸಂದೇಶವನ್ನು ಪ್ರಸಾರ ಮಾಡಲಾಗುತ್ತಿದೆ.<br><br>• ರಾಜ್ಯದಾದ್ಯಂತ ಬಸ್ ನಿಲ್ದಾಣಗಳಲ್ಲಿ ಶ್ರವ್ಯ ಮತ್ತು ದೃಶ್ಯ ಮಾಧ್ಯಮದ ಮೂಲಕ ಆಡಿಯೋ/ವಿಡಿಯೋ ಸ್ಪಾಟ್‌ಗಳನ್ನು ಬಿತ್ತರಿಸಲಾಗುತ್ತಿದೆ.<br><br>• ರಾಜ್ಯದಾದ್ಯಂತ ಜಾನಪದ ಕಲಾ ತಂಡಗಳ ಮೂಲಕ ಹೆಚ್‌ಐವಿ/ಏಡ್ಸ್ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br><br>• ರಾಜ್ಯದಾದ್ಯಂತ ಗ್ರಾಮ ಪಂಚಾಯತಿ ಸದಸ್ಯರುಗಳಿಗೆ ಹೆಚ್‌ಐವಿ/ಏಡ್ಸ್ ಬಗ್ಗೆ ತರಬೇತಿಯನ್ನು ಆಯೋಜಿಸಿ ಹೆಚ್‌ಐವಿ/ಏಡ್ಸ್ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತಿದೆ.<br><br>• ವಿವಿಧ ಇಲಾಖೆ, ಸಂಸ್ಥೆಗಳಿಂದ ನಾಮನಿರ್ದೇಶಿತ (nominated/designated) ದೂರು ಅಧಿಕಾರಿಗಳಿಗೆ ಜಿಲ್ಲಾ ಮಟ್ಟದಲ್ಲಿ ತರಬೇತಿಯನ್ನು ಆಯೋಜಿಸಿ ಹೆಚ್‌ಐವಿ/ಏಡ್ಸ್ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತಿದೆ.<br><br>• ರಾಜ್ಯದಾದ್ಯಂತ 7700 ಶಾಲಾ ಹಾಗೂ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಹದಿಹರೆಯದ ಶಿಕ್ಷಣ ಕಾರ್ಯಕ್ರಮವನ್ನು ಆಯೋಜಿಸಿ, ವಿದ್ಯಾರ್ಥಿಗಳಲ್ಲಿ ಹೆಚ್‌ಐವಿ/ಏಡ್ಸ್ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. |

| | | |
|---|---|---|
| | | • ರಾಜ್ಯದಾದ್ಯಂತ 1756 ರೆಡ್ ರಿಬ್ಬನ್ ಕ್ಲಬ್‌ಗಳನ್ನು ಸ್ಥಾಪಿಸಲಾಗಿದ್ದು, ವಿವಿಧ ಚಟುವಟಿಕೆಗಳ ಮೂಲಕ ಹೆಚ್‌ಐವಿ/ಏಡ್ಸ್ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ<br>• ಹೆಚ್‌ಐವಿ/ಏಡ್ಸ್ ಮಾಹಿತಿಯನ್ನು ಎಸ್.ಎಂ.ಎಸ್ ಅಭಿಯಾನದ ಮೂಲಕ ಜನರಿಗೆ ಅರಿವು ಮೂಡಿಸಲಾಗುತ್ತಿದೆ.<br>• ಹೆಚ್‌ಐವಿ ಸೋಂಕಿನ ಹರಡುವಿಕೆಯನ್ನು ನಿಯಂತ್ರಿಸುವ ಉದ್ದೇಶದಿಂದ Mobilisation for AIDS Suraksha (MAS) ವಿಶೇಷ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ.<br>• ಹೆಚ್‌ಐವಿ/ಏಡ್ಸ್ ಹರಡುವುದನ್ನು ತಡೆಗಟ್ಟುವ ಮತ್ತು ಇದರ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮತ್ತು ಜಾಗೃತಿ ಮೂಡಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸಂಸ್ಥೆ, ಮಾಸ್ಕಾಟ್ ವಿನ್ಯಾಸ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.<br><br>ಮೇಲಿನ ಕ್ರಮಗಳ ಮೂಲಕ ರಾಜ್ಯದಲ್ಲಿ ಹೆಚ್‌ಐವಿ ಸೋಂಕಿನ ಪ್ರಮಾಣ ವರ್ಷದಿಂದ ವರ್ಷಕ್ಕೆ ಇಳಿಮುಖವಾಗುತ್ತಿದೆ. ಕಳೆದ 10 ವರ್ಷಗಳ ಅಂಕಿ-ಅಂಶಗಳ ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |
| ಇ | ಹೆಚ್.ಐ.ವಿ ತಡೆಗಟ್ಟಲು ಹಲವಾರು ಕ್ರಮಗಳನ್ನು ಕೈಗೊಂಡಿದ್ದರೂ ಈ ರೋಗವನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಾಗದಿರುವುದಕ್ಕೆ ಕಾರಣಗಳೇನು? (ವಿವರವಾದ ಮಾಹಿತಿ ನೀಡುವುದು | ಈ ಕೆಳಕಂಡ ಕಾರಣಗಳಿಂದ ಹೆಚ್‌ಐವಿ ಸೋಂಕನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಾಗಿರುವುದಿಲ್ಲ.<br>• ಹೆಚ್‌ಐವಿ ಮತ್ತು ಏಡ್ಸ್ (ತಡೆ ಹಾಗೂ ನಿಯಂತ್ರಣ) ಕಾಯ್ದೆ 2017 ಪ್ರಕಾರ ಹೆಚ್‌ಐವಿ ಪರೀಕ್ಷೆಯನ್ನು ಕಡ್ಡಾಯಗೊಳಿಸುವಂತಿಲ್ಲ.<br>• ಸ್ವಯಂ ಪ್ರೇರಿತವಾಗಿ ಒಪ್ಪಿದ ಜನರಿಗೆ ಮಾತ್ರ ಹೆಚ್‌ಐವಿ ಪರೀಕ್ಷೆಯನ್ನು ಮಾಡಲಾಗುತ್ತಿದೆ.<br>• ಹೆಚ್‌ಐವಿ ಸೋಂಕನ್ನು ಸಂಪೂರ್ಣವಾಗಿ ಗುಣಪಡಿಸಲು ಯಾವುದೇ ಚಿಕಿತ್ಸೆ ಇರುವುದಿಲ್ಲ.<br>• ಸಾಮಾಜಿಕ ಮಾಧ್ಯಮಗಳು/ Dating Apps ಗಳ ಮೂಲಕ ಜನ ಸಂಪರ್ಕ ಹೆಚ್ಚಾಗುತ್ತಿದ್ದು, ಸಂಪರ್ಕ ಪತ್ತೆಹಚ್ಚುವಿಕೆ (Contact Tracing) ಕಷ್ಟಕರವಾಗಿರುತ್ತದೆ.<br>• Anti-Retroviral Therapy ಹೆಚ್‌ಐವಿ ಸೋಂಕಿತರ ಜೀವಿತಾವಧಿಯನ್ನು ಹೆಚ್ಚಿಸುತ್ತದೆ ಹೊರತು ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಿಲ್ಲ. |

HFW 109 SBV 2026

[ಯು.ಟಿ.ಖಾದರ್ ಫರೀದ್]
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

# ಅನುಬಂಧ-1

## ಜಿಲ್ಲಾವಾರು ಹೆಚ್‌ಐವಿ ಸೋಂಕಿತರ ವಿವರ

**(As per MAS SOCH Dashboard 5th August -26)**

| ಕ್ರಮ ಸಂಖ್ಯೆ | ಜಿಲ್ಲೆ | ಜಿಲ್ಲೆಗಳಲ್ಲಿ ಪತ್ತೆಯಾದ ಎಚ್‌ಐವಿ ಪಾಸಿಟಿವ್ ಪ್ರಕರಣಗಳು |
|---|---|---|
| 1 | ಮಂಡ್ಯ | 7615 |
| 2 | ಕೊಡಗು | 1520 |
| 3 | ಕೋಲಾರ | 5495 |
| 4 | ಬೆಂಗಳೂರು ದಕ್ಷಿಣ (Ramanagara) | 3136 |
| 5 | ಚಿತ್ರದುರ್ಗ | 5287 |
| 6 | ಕಲಬುರಗಿ | 7809 |
| 7 | ಯಾದಗಿರಿ | 4431 |
| 8 | ಗ್ರೇಟರ್ ಬೆಂಗಳೂರು ಪ್ರಾಧಿಕಾರ | 30273 |
| 9 | ಬೀದರ್ | 4852 |
| 10 | ಬೆಳಗಾವಿ | 25311 |
| 11 | ಚಾಮರಾಜನಗರ | 3559 |
| 12 | ದಕ್ಷಿಣ ಕನ್ನಡ | 5540 |
| 13 | ಹಾಸನ | 5869 |
| 14 | ರಾಯಚೂರು | 9028 |
| 15 | ಉಡುಪಿ | 4661 |
| 16 | ವಿಜಯಪುರ | 12171 |
| 17 | ಉತ್ತರ ಕನ್ನಡ | 2585 |
| 18 | ಧಾರವಾಡ | 7889 |
| 19 | ಬೆಂಗಳೂರು ಗ್ರಾಮಾಂತರ | 3126 |
| 20 | ಬಾಗಲಕೋಟೆ | 20389 |
| 21 | ಕೊಪ್ಪಳ | 7150 |
| 22 | ಚಿಕ್ಕಮಗಳೂರು | 3290 |
| 23 | ಹಾವೇರಿ | 5006 |
| 24 | ವಿಜಯನಗರ | 5208 |
| 25 | ಗದಗ | 4761 |
| 26 | ಶಿವಮೊಗ್ಗ | 4308 |
| 27 | ಚಿಕ್ಕಬಳ್ಳಾಪುರ | 4183 |
| 28 | ತುಮಕೂರು | 9389 |
| 29 | ಬಳ್ಳಾರಿ | 6593 |
| 30 | ಮೈಸೂರು | 12713 |
| 31 | ದಾವಣಗೆರೆ | 5180 |
| | ಒಟ್ಟು | 238327 |

Joint Director - CST,
Karnataka State AIDS Prevention Society
Bangalore.

<u>**ಅನುಬಂಧ-2**</u>

**ಸಮಗ್ರ ಆಪ್ತಸಮಾಲೋಚನಾ ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಕಳೆದ 10 ವರ್ಷಗಳಲ್ಲಿ ಪರೀಕ್ಷಿಸಿದ ಹಾಗೂ ಪತ್ತೆಹಚ್ಚಲಾದ ಹೆಚ್‌ಐವಿ ಪ್ರಕರಣಗಳು:**

| ವರ್ಷ | ಪರೀಕ್ಷಿಸಿದ ಪ್ರಕರಣಗಳ ಸಂಖ್ಯೆ | ಪತ್ತೆಯಾದ ಸೋಂಕಿತ ಪ್ರಕರಣಗಳ ಸಂಖ್ಯೆ |
|---|---|---|
| 2016-17 | 2072586 | 20860 |
| 2017-18 | 2361760 | 19741 |
| 2018-19 | 3899919 | 18957 |
| 2019-20 | 4025485 | 16308 |
| 2020-21 | 2847939 | 10095 |
| 2021-22 | 3472299 | 11156 |
| 2022-23 | 4750032 | 13382 |
| 2023-24 | 5425468 | 13722 |
| 2024-25 | 5087493 | 12871 |
| 2025-26 | 4954833 | 11773 |

ಯೋಜನಾ ನಿರ್ದೇಶಕರು
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ,
ಬೆಂಗಳೂರು.